ಅವನೊಬ್ಬ ಸರ್ಕಾರಿ ಇಲಾಖೆಯ ನೌಕರನಾಗಿದ್ದ. ಯಾವ ಇಲಾಖೆ?... ಯಾವ ಇಲಾಖೆಯಾದರೇನು? ಯಾಕೆಂದರೆ ಎಲ್ಲಾ ಇಲಾಖೆಗಳೂ ಒಂದೇ ತೆರನಾಗಿದ್ದು, ಅವುಗಳ ಕಾರ್ಯಕ್ಷಮತೆಯೂ ಸಹ ಹಾಗೆಯೇ ಇರುತ್ತವೆ. ಒಂದು ವೇಳೆ ಈಗ ನಾನೊಂದು ಇಲಾಖೆಯ ಹೆಸರನ್ನು ಹೇಳಿದರೆ, ಅದು ನನ್ನ ಜೀವವನ್ನು ತೆಗೆಯುತ್ತದೆ ಎಂಬುದು ನಿಶ್ಚಿತವೆಂದು ತಿಳಿಯಿರಿ. ಹಾಂ, ಈ ಕಥೆ ಸೆಂಟ್ ಪೀಟರ್ಸ್ ಬರ್ಗ್‌ನಲ್ಲಿರುವ ಇಲಾಖೆಗಳಲ್ಲಿನ ಒಂದು ಇಲಾಖೆಯ ಒಬ್ಬ ನೌಕರನಿಗೆ ಸಂಬಂಧಿಸಿದೆ. ಎಲ್ಲಾ ಸಾಮಾನ್ಯ ನೌಕರರಂತೆ ಅವನೂ ಸಹ ಸಾಧಾರಣ ಮೈಕಟ್ಟಿನ, ತೆಳು ಕಾಯದ ವ್ಯಕ್ತಿಯಾಗಿದ್ದ. ಅವನ ತಲೆ ಕೂದಲುಗಳು ಸಹ ತಮ್ಮ ಅನುಪಸ್ಥಿತಿಯನ್ನು ಎಂದೋ ಸಾರಿದ್ದವು. ಅವನ ಹಣೆ ಮತ್ತು ತಲೆಯ ವಿಭಜನೆಯ ರೇಖೆಯನ್ನು ಅಂಕಿತಗೊಳಿಸುವುದು ಕಷ್ಟದ ಕೆಲಸವಾಗಿತ್ತು. ಈ ವರ್ಣನೆಯಿಂದ ಓದುಗರಿಗೆ ಅವನ ಆರ್ಥಿಕ ಪರಿಸ್ಥಿತಿಯ ಸುಳಿವು ಸಿಕ್ಕಿರಬಹುದು.

ಓಹ್, ನಾನು ಅವನ ಹೆಸರು ಹೇಳುವುದನ್ನು ಮರೆತೆ. ಅವನ ಹೆಸರಿನ ಹಿಂದೆಯೂ ಒಂದು ದೀರ್ಘ ಕಥೆ ಅಡಗಿದೆ. ಅದೇನೆಂದರೆ, ಅವನು ಹುಟ್ಟಿದೊಡನೆಯೇ ತಾಯಿಗೆ ಸೂಚಿಸಿದ ಹೆಸರುಗಳಲ್ಲಿ ಒಂದು ಹೆಸರೂ ಅವಳಿಗೆ ಇಷ್ಟವಾಗದಿದ್ದಾಗ ಅವಳು ಸೋತು, 'ಇವನ ತಂದೆಯ ಹೆಸರು ಅಕಾಕಿಯಾಗಿತ್ತು, ಅದಕ್ಕಾಗಿ ಇವನ ಹೆಸರನ್ನು ಅಕಾಕಿ ಅಕಾಕೀವಿಚ್ ಎಂದಿಡುತ್ತೇವೆ' ಎಂದಳು.

ಅಕಾಕಿ ಅಕಾಕೀವಿಚ್ ಈ ಇಲಾಖೆಯಲ್ಲಿ ಎಂದಿನಿಂದ ಇದ್ದಾನೋ, ಇವನಿಗೆ ಯಾರು ನೌಕರಿ ಕೊಟ್ಟರೋ ತಿಳಿದಿಲ್ಲ. ಆದರೆ ಜನ ಅವನು ಕೂತಿರುವ ಜಾಗದಲ್ಲಿಯೇ ಬಹು ಸಮಯದಿಂದ ನೋಡುತ್ತಿದ್ದಾರೆ. ಎಷ್ಟು ಜನ ನೌಕರರು ಬಂದುಹೋದರೋ, ಎಷ್ಟು ಜನ ನೌಕರರು ಬಡ್ತಿ ಪಡೆದು ಹೋದರೋ, ಎಷ್ಟು ಜನ ನೌಕರರು ವರ್ಗಾವಣೆಗೊಂಡರೋ, ಎಷ್ಟು ಜನ ನೌಕರರು ನಿವೃತ್ತಿಯನ್ನು ಹೊಂದಿದರೋ ಲೆಕ್ಕವಿಡುವುದು ಕಷ್ಟ. ಆದರೆ ಅಕಾಕಿ ಅಕಾಕೀವಿಚ್‌ನ ಜಾಗ ಬದಲಾಗಿಲ್ಲ, ಅವನ ಕೆಲಸವೂ ಬದಲಾಗಿಲ್ಲ. ಅವನ ಕೆಲಸ ಇಲಾಖೆಯ ಯಾವುದಾದರೊಂದು ಕರಡು ಪ್ರತಿಯನ್ನು ಸುಂದರವಾಗಿ ಬರೆದು ಮರಳಿ ಕಳುಹಿಸುವುದಾಗಿತ್ತು.

ಅಕಾಕಿ ಅಕಾಕೀವಿಚ್ ತುಂಬಾ ನಿಷ್ಠೆಯಿಂದ ತನ್ನ ಕೆಲಸವನ್ನು ನಿರ್ವಹಿಸುತ್ತಿದ್ದ. ಅವನು ಬಣ್ಣ ಬಣ್ಣದ ಇಂಕಿನಿಂದ ತನ್ನ ಬರವಣಿಗೆಯನ್ನು ಅಲಂಕರಿಸುತ್ತಿದ್ದ; ಕಾಗದದ ಮೇಲೆ ಹರಡಿದ ಮುತ್ತಿನಂಥ ಅಕ್ಷರಗಳನ್ನು ನೋಡಿ ಅವನು ಒಮ್ಮೊಮ್ಮೆ ಮುಗುಳ್ನಗುತ್ತಿದ್ದ, ಒಮ್ಮೊಮ್ಮೆ ಸಂತಸದಿಂದ ಸಿಳ್ಳೆ ಹೊಡೆಯುತ್ತಿದ್ದ, ಒಮ್ಮೊಮ್ಮೆ ನಗುತ್ತಿದ್ದ. ಅವನ ಸಹೋದ್ಯೋಗಿಗಳು ಅವನ ಈ ಕರ್ತವ್ಯ ನಿಷ್ಠೆ ಮತ್ತು ಸರಳತೆಯ ಬಗ್ಗೆ ಸಾಮಾನ್ಯವಾಗಿ ಅವನನ್ನು ಗೇಲಿ ಮಾಡುತ್ತಿದ್ದರು, ಲೇವಡಿ ಮಾಡಿ ನಗುತ್ತಿದ್ದರು. ಆದರೆ ಇವು ಅಕಾಕಿ ಅಕಾಕೀವಿಚ್ ಮೇಲೆ ಯಾವುದೇ ಪರಿಣಾಮ ಬೀರುತ್ತಿರಲಿಲ್ಲ. ಅವನು ಇದ್ಯಾವುದನ್ನೂ ಕೇಳಲೇ ಇಲ್ಲವೆಂಬಂತೆ ತೋರುತ್ತಿತ್ತು. ಅಕಾಕ ಅಕಾಕೀವಿಚ್‌ನನ್ನು ನೋಡಿದರೆ ಯಾರಿಗಾದರೂ ಕಚಗುಳಿಯಿಟ್ಟಂತಾಗುತ್ತಿತ್ತು; ಇದರಿಂದಾಗಿ ಅವನನ್ನು ಛೇಡಿಸುತ್ತಿದ್ದರು. ಕೆಲವೊಮ್ಮೆ ಅವನ ಎಣ್ಣೆಯಿಲ್ಲದ ತಲೆಗೂದಲುಗಳ ಮೇಲೆ ಹುಲ್ಲುಕಸ ಬಿದ್ದಿರುತ್ತಿದ್ದರೆ, ಇನ್ನು ಕೆಲವೊಮ್ಮೆ ಬಟ್ಟೆಗಳ ಮೇಲೆ ಕಲೆಗಳು ಅಥವಾ ತಿಪ್ಪೆ ಅಂಟಿಕೊಂಡಿರುತ್ತಿತ್ತು; ಇದು ಅವನಿಗೆ ತಿಳಿಯುತ್ತಲೇ ಇರಲಿಲ್ಲ. ನಿಜ ಹೇಳಬೇಕೆಂದರೆ, ಅವನು ದಾರಿಯಲ್ಲಿ ಸಾಗುವಾಗ, ತಾನು ಫುಟ್‌ಪಾತ್‌ನಲ್ಲಿ ಹೋಗುತ್ತಿದ್ದೇನೆಯೋ ಅಥವಾ ರಸ್ತೆಯಲ್ಲಿ ಹೋಗುತ್ತಿದ್ದೇನೆಯೋ, ಮನೆಯ ಬಾಲ್ಕನಿಯ ಕೆಳಗೆ ಹೋಗುತ್ತಿದ್ದೇನೆಯೋ ಅಥವಾ ಮರದ ಕೆಳಗೆ ಹೋಗುತ್ತಿದ್ದೇನೆಯೋ, ಮೇಲಿನಿಂದ ಕಸ ಬೀಳುತ್ತಿದೆಯೋ ಅಥವಾ ಪಕ್ಷಿಗಳ ಮಲಮೂತ್ರ ಬೀಳುತ್ತಿದೆಯೋ ಎಂಬುದರ ಅರಿವೂ ಆಗುತ್ತಿರಲಿಲ್ಲ. ಒಂದು ವೇಳೆ ಏನಾದರೂ ಬಿದ್ದಿದ್ದರೆ ಅದನ್ನು ಕೊಡವಿಕೊಳ್ಳಬೇಕು ಅಥವಾ ತೊಳೆದುಕೊಳ್ಳಬೇಕು ಎಂಬ ಬಗ್ಗೆಯೂ ಅವನಿಗೆ ಕಾಳಜಿ ಇರುತ್ತಿರಲಿಲ್ಲ.

ಅದೆಷ್ಟೋ ವರ್ಷಗಳಿಂದ ಧರಿಸುತ್ತಿದ್ದ ಅವನ ಕೋಟು, ತನ್ನ ಬಣ್ಣವನ್ನು ಕಳೆದುಕೊಂಡಿದ್ದು ಮಾತ್ರವಲ್ಲದೆ, ಅದರ ಮೂಲ ಬಣ್ಣವೇನಾಗಿತ್ತೆಂಬುದನ್ನೂ ಪತ್ತೆ ಹಚ್ಚಲು ಸಾಧ್ಯವಿರಲಿಲ್ಲ. ಕೊಳಕಾಗಿದ್ದ, ಅಲ್ಲಲ್ಲಿ ಹೊಲಿಗೆ ಕಿತ್ತು ಬಂದಿದ್ದ ಮತ್ತು ಕಿತ್ತಿದ್ದ ತೇಪೆಗೆ ಮತ್ತೆಮತ್ತೆ ಹೊಲಿಗೆಯನ್ನು ಹಾಕಿದ್ದರಿಂದ ಕೋಟಿನ ಆಕಾರ ಚಿಕ್ಕದಾಗಿತ್ತು. ಅಲ್ಲದೆ ಅದೆಷ್ಟು ಹರಿದಿತ್ತೆಂದರೆ ಅದರ ಒಳ ಬಟ್ಟೆಯೂ ಹೊರಗೆ ಇಣಿಕಿ ನೋಡುತ್ತಿತ್ತು.

ಚಳಿಗಾಲ. ಕೋಟನ್ನು ದುರಸ್ತಿ ಮಾಡಿಸಲೇಬೇಕೆಂದು ಅಕಾಕಿ ಅಕಾಕೀವಿಚ್ ಯೋಚಿಸಿದ. ಇದಕ್ಕಾಗಿ ಬಿಡುವು ಮಾಡಿಕೊಂಡು ಆ ದುಷ್ಟ ಸ್ವಭಾವದ ದರ್ಜಿ ಪೆಟ್ರೋವಿಚ್‌ನ ಬಳಿಗೆ ಹೋಗಲೇ ಬೇಕಾಗುವುದು. ಪೆಟ್ರೋವಿಚ್ ದುಷ್ಟ ಸ್ವಭಾವದವನಾಗಿದ್ದು ಅವನು ತನ್ನ ಹೆಂಡತಿಯೊಂದಿಗೆ ಜಗಳ ಮಾಡಿಕೊಂಡಾಗ ತನ್ನೆಲ್ಲಾ ಸಿಟ್ಟನ್ನು ಗಿರಾಕಿಗಳ ಮೇಲೆ ತೋರಿಸುತ್ತಿದ್ದ. ಅವನು ಕುಡಿದ ಅಮಲಿನಲ್ಲಿದ್ದಾಗ ಮೃದುವಾಗುತ್ತಿದ್ದ; ಆಗ ಗಿರಾಕಿಗಳು ಅವನಿಗೆ ಕಡಿಮೆ ಹಣ ಕೊಡುತ್ತಿದ್ದರು; ಇದಕ್ಕಾಗಿ ಅವನ ಹೆಂಡತಿ ಅವನನ್ನು ಹಳಿಯುತ್ತಿದ್ದಳು. ಅಕಾಕಿ ಅಕಾಕೀವಿಚ್ ಪೆಟ್ರೋವಿಚ್‌ನ ಮನೆಗೆ (ಇದನ್ನು ಅಂಗಡಿ ಎಂದೂ ಹೇಳಬಹುದು; ಕಾರಣ ಆ ಕೋಣೆ, ಮನೆ ಮತ್ತು ಅಂಗಡಿ ಎರಡಕ್ಕೂ ಬರುತ್ತಿತ್ತು.) ಹೋದಾಗ ಪೆಟ್ರೋವಿಚ್‌ನ ಹೆಂಡತಿ ಅವನನ್ನು ಗದರಿಸುತ್ತಿದ್ದಳು. ತಾನು ಬಂದ ಸಮಯ ಸರಿಯಿಲ್ಲವೆಂದು ಅಕಾಕಿ ಅಕಾಕೀವಿಚ್ ತಿಳಿದ. ಅವನು ಅಲ್ಲಿಂದ ಮರಳಿ ಹೋಗಲು ಹೊರಳಿದ, ಆದರೆ ಆಗಲೇ ಪೆಟ್ರೋವಿಚ್‌ನ ದೃಷ್ಟಿ ಅವನ ಮೇಲೆ ಬಿತ್ತು. ಈಗ ಬೇರೆ ಮಾರ್ಗವಿರಲಿಲ್ಲ. ಅವನು ಒಳಗೆ ಹೋಗಿ ಪೆಟ್ರೋವಿಚ್‌ಗೆ ವಿನಯದಿಂದ ತನ್ನ ಕೋಟನ್ನು ತೋರಿಸಿ, ಹಿಂಜರಿಯುತ್ತಾ ಹೇಳಿದ, 'ಹೆಚ್ಚಿಲ್ಲ....ಈ ಹೆಗಲ ಹತ್ತಿರ...ಮತ್ತೆ ಕಾಲರ್ ಹತ್ತಿರ....ಈ ಒಳ ಬಟ್ಟೆಯನ್ನು ಸ್ವಲ್ಪ...'

ಪೆಟ್ರೋವಿಚ್ ಕೋಟನ್ನು ತಿರುಗಾ ಮುರುಗಾ ಮಾಡಿ ನೋಡಿದ. ತಲೆಯಾಡಿಸಿದ. ಮತ್ತೆ ಕೋಟನ್ನು ಹಿಂದುಮುಂದು ಮಾಡಿ ನೋಡಿದ. ಮತ್ತೆ ತಲೆಯಾಡಿಸಿದ. ನಂತರ ಕೈ ಚಾಚಿ ಮೇಜಿನ ಖಾನೆಯಿಂದ ನಶ್ಯದ ಡಬ್ಬಿಯನ್ನು ತೆಗೆದುಕೊಂಡು ಒಂದು ಚಿಟಿಕೆ ನಶ್ಯವನ್ನು ಮೂಗಿನ ಹೊಳ್ಳೆಗೇರಿಸಿಕೊಂಡು ಹೇಳಿದ, 'ಇದರ ಸರ್ವೀಸ್ ಮುಗಿದು ಹೋಗಿದೆ.'

ಅಕಾಕಿ ಅಕಾಕೀವಿಚ್‌ನ ಎದೆ ಧಸಕ್ಕೆಂದಿತು. ಅವನು ಪ್ರಾರ್ಥಿಸಿಕೊಳ್ಳುವುದಕ್ಕೂ ಮೊದಲೇ ಪೆಟ್ರೋವಿಚ್ ತನ್ನ ತೀರ್ಮಾನವನ್ನು ಹೇಳಿದ, 'ಹೊಸ ಕೋಟನ್ನೇ ಹೊಲಿಸಿಕೊಳ್ಳಬೇಕಾಗುತ್ತದೆ.'

'ಸ್ವಲ್ಪ ತೇಪೆಯನ್ನೇ ಹಾಕಿ, ಸದ್ಯ ಈ ಚಳಿಗಾಲ ಕಳೆದರೆ ಸಾಕು.' ಅಕಾಕಿ ಅಕಾಕೀವಿಚ್ ಅಂಗಲಾಚಿದ. ಆದರೆ ಪೆಟ್ರೋವಿಚ್‌ನ ತೀರ್ಮಾನ ದೃಢವಾಗಿತ್ತು. ಕಡೆಗೆ ಅಕಾಕಿ ಅಕಾಕೀವಿಚ್ ಸೋತು ಕೇಳಿದ, 'ಹೊಸ ಕೋಟಿಗೆ ದುಡ್ಡು ಎಷ್ಟು ಬೇಕಾಗುವುದು?'

'ನೂರಾ ಐವತ್ತು ರೂಬಲ್.'

'ನೂರಾ ಐವತ್ತು ರೂಬಲ್!' ಅಕಾಕಿ ಅಕಾಕೀವಿಚ್ ಗಾಬರಿಯಾದ. ಯಾರಾದರೂ ಗಾಬರಿಗೊಂಡರೆ ಯಾರಿಗಾದರೂ ಒಳಗೊಳಗೇ ಆತ್ಮಸಂತೋಷವಾಗುವಂತೆ ಪೆಟ್ರೋವಿಚ್ ಸಂತಸಗೊಂಡ. ಅಕಾಕಿ ಮುಗ್ಧತೆಯಿಂದ ಮನೆಗೆ ಬಂದ. ಅವನ ಇದುವರೆಗಿನ ಕೂಡಿಟ್ಟ ಹಣ ನೂರು ರೂಬಲ್ ಮಾತ್ರವಾಗಿತ್ತು. ಇನ್ನು ಐವತ್ತು ರೂಬಲ್ ಎಲ್ಲಿಂದ ತರುವುದು?

ಆದರೆ ಅವನ ಅದೃಷ್ಟ! ಇಲಾಖೆಯ ನಿರ್ದೇಶಕರಿಂದ ಬೋನಸ್ ಪ್ರಕಟಗೊಂಡಿತು. ಅಕಾಕಿಗೆ ಅರವತ್ತು ರೂಬಲ್ ಬೋನಸ್ ಸಿಗುವುದು. ಇನ್ನು ಕೋಟು ಸಿದ್ಧವಾಯಿತು ಎಂದು ಅವನು ಪೆಟ್ರೋವಿಚ್ ಬಳಿಗೆ ಓಡೋಡಿ ಬಂದ. ಅವನನ್ನು ಜೊತೆಗೆ ಕರೆದೊಯ್ದು ಕೋಟಿನ ಬಣ್ಣ ಮತ್ತು ಡಿಸೈನನ್ನು ಆಯ್ಕೆ ಮಾಡಿದ.

ಪೆಟ್ರೋವಿಚ್ ಅಕಾಕಿಗೆ ಕೋಟು ತೊಡಿಸಿ ತೋರಿಸುವ ದಿನವೂ ಬಂದಿತು. ಅಕಾಕಿ ಹೊಸ ಕೋಟು ಧರಿಸಿ ನೇರವಾಗಿ ಕಚೇರಿಗೆ ಹೋದ. ಅವನ ಸಹೋದ್ಯೋಗಿಗಳು ಅವನ ಹೊಸ ಕೋಟನ್ನು ಮನಸಾರೆ ಪ್ರಶಂಸಿಸಿದರು. ಮೊದಲು ಅಕಾಕಿ ಧನ್ಯವಾದ ಹೇಳಿದ, ನಂತರ ಸಂಕೋಚಪಟ್ಟ.

ಆಗ ಒಬ್ಬ ಸ್ನೇಹಿತ ಪಾರ್ಟಿಗಾಗಿ ಬೇಡಿಕೆಯಿಟ್ಟ. ನಂತರ ಎಲ್ಲರೂ ಪಾರ್ಟಿಗೆ ಬೇಡಿಕೆಯಿಟ್ಟರು. ಆದರೆ ಪಾಪದ ಅಕಾಕಿ... ಅವನ ದಯನೀಯ ಪರಿಸ್ಥಿತಿಯನ್ನು ಕಂಡು ಅವನ ಮೇಲಧಿಕಾರಿ ಹೇಳಿದ, 'ಸರಿ, ಇವತ್ತು ಸಂಜೆ ನನ್ನ ಮನೆಯಲ್ಲಿ ಪಾರ್ಟಿ ಕೊಡ್ತೀನಿ, ಯಾಕೆಂದರೆ ಇವತ್ತು ನನ್ನ ಹುಟ್ಟಿದ ಹಬ್ಬ.' ಎಲ್ಲರೂ ಚಪ್ಪಾಳೆ ತಟ್ಟಿ ಸಂಜೆಯನ್ನು ನಿರೀಕ್ಷಿಸಿದರು.

ಅಕಾಕಿ ಮನೆಗೆ ಬಂದ. ತುಂಬಾ ಎಚ್ಚರಿಕೆಯಿಂದ ಕೋಟನ್ನು ಕಳಚಿ ಗೂಟಕ್ಕೆ ನೇತು ಹಾಕಿದ. ಹಳೆ ಕೋಟು ಈಗ ಅವನಿಗೆ ನಿಜವಾಗಿಯೂ ಕಚಡಾ ಎಂದು ಅನ್ನಿಸಿತು. ಅವನೂ ಸಂಜೆಯ ಪಾರ್ಟಿಯನ್ನು ನಿರೀಕ್ಷಿಸಿದ. ಮೇಲಿನ